(*c*) if not, the steps taken to prepare such list and to curb the anti-social activities by traders, merchants and dealers ?

SMT. E. E. VAZ (Minister of State for Food and Civil Supplies).—

(*a*) No such list of professional blackmarketeers is maintained in Gulbarga and Bidar Districts.

(*b*) Does not arise.

(*c*) All attempts are being made to prepare a list of professional blackmarketeers and every possible efforts are also being made to curb anti-social activities of traders, merchants and dealers.

CALLING ATTENTION TO A MATTER OF URGENT PUBLIC IMPORTANCE

re: Hardship caused to School Teachers on account of mass-transfers.

SRI K. H. HANUME GOWDA (Hassan).—Sir, I call the attention of the Minister for Education to the hardship caused to Primary and Middle School Teachers on account of mass-transfers.

SRI A. R. BADARINARAYANA (Minister for Education) -

Sir, Transfer of Government Servants is inevitable on account of exigencies of service. Instances of Primary School Teachers staying at the same place for over a decade are not wanting, thereby resulting in vested interests with its impact on the quality of teaching, regularity of attendance at schools, etc. On the other hand, complaints were also being received that transfers were indiscriminately made without adherence to the guidelines.

(SRI A. R. BADARINARAYANA)

2. Therefore, in order to ensure uniform practice and procedure in the matter of transfer of Primary School Teachers, keeping in view the earlier existing orders on this subject, Government issued orders in Government Order No. ED 65 PMS 73, dated 25th April 1973 enunciating certain guidelines regulating the transfer of Primary School Teachers.

3. Pursuant to the above Government Order, transfers were made and majority of the transferees have reported at their places of posting and are drawing their salaries. However, some of those who were transferred assailed the Government Order dated 25th April 1973 by way of a Writ Petition in the High Court of Mysore. The High Court of Mysore by its judgment dated 7th August 1973 quashed clause 3 of the Government Order and certain provisions of clause 4 and 5 which are corollaries to clause 3. The Supreme Court has not quashed the Government Order dated 25th April 1973, inasmuch as the matter has not gone up before the Supreme Court except the interim order of stay. On the merits of the case the Supreme Court had no occasion to adjudicate upon.

4. The judgment of the High Court of Mysore rendered on 7th August 1973 and its implications are under consideration of Government and the due process of law has not been set at rest.

5. Unless a teacher is working against a particular post his salary cannot be drawn and disbursed. In respect of those who were transferred and have reported at their new places of posting, salary is being drawn and disbursed. In respect of those who have not gone and reported to their new places of posting it has not been found possible to disburse their salaries, inasmuch as the Government Order streamlining the transfer was itself the proceedings before the Court.

6. Action is being separately taken to prefer an appeal against the High Court judgment dated 7th August 1973 and also to move the Court for a stay of the operation of the Order.

1.00 P. M.

ಶ್ರೀ ಕೆ. ಹೆಚ್. ಹನುಮೇಗೌಡ :— ಉಪಾಧ್ಯಾಯರುಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಟ್ರಾನ್ಸ್‌ಫರ್ ಮಾಡಿದಾಗ ಕೆಲವರು ರಿಲೀವ್ ಆಗಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡರು, ಇನ್ನು ಕೆಲವರು ರಿಲೀವ್ ಆಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವುದರೊಳಗೆ ಹೈಕೋರ್ಟಿನಿಂದ ಸ್ಟೇ ಬಂದು ಯಾರನ್ನು ಪೋಸ್ಟ್ ಮಾಡಿದ್ದರೋ, ಆ ಜಾಗದಲ್ಲಿ ಇದ್ದ ಟೀಚರ್ಸ್ ರಿಲೀವ್ ಆಗಲಿಲ್ಲ. ಇವರು ಹಾಗೆಯೇ ಉಳಿದು ಬಿಟ್ಟರು. ನೂರಾರು, ಸಾವಿರಾರು ಜನ ಉಪಾಧ್ಯಾಯರುಗಳು ಸಂಬಳ ಇಲ್ಲದೆ ಅಲೆಯುತ್ತಿದ್ದಾರೆ. ಯಾವ ತಪ್ಪಿಗೋಸ್ಕರ ಹೀಗೆ ಶಿಕ್ಷೆ ಕೊಡುತ್ತಿದ್ದೀರಿ. ದಯಮಾಡಿ ತಿಳಿಸಿ ?

ಶ್ರೀ ಎ. ಆರ್. ಬದರಿನಾರಾಯಣ.— ಉಪಾಧ್ಯಾಯರುಗಳು ಒಂದು ರಿಲೀವ್ ಆಗಿ ಇನ್ನೊಂದು ಕಡೆ ಹೋಗಿ ಸೇರುವುದರೊಳಗೆ ಹೈಕೋರ್ಟಿನಿಂದ ಸ್ಟೇ ಆರ್ಡರ್ ಬಂತು ಎಂದು ಹೇಳಿದರು. ಆ ರೀತಿ ಹೋಗಿ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ :— ಉಪಾಧ್ಯಾಯರು ರಿಲೀವ್ ಆಗಿ ಬೇರೆ ಕಡೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಹೋದಾಗ ಅಲ್ಲಿ ಜಾಗ ಇರಲಿಲ್ಲ. ಹೀಗಾಗಿ ಸಾವಿರಾರು ಜನ ಉಪಾಧ್ಯಾಯರು ತೊಂದರೆಪಡುತ್ತಿದ್ದಾರೆ ಹಳ್ಳಿಗಳಲ್ಲಿ ಸಾವಿರಾರು ಶಾಲೆಗಳಿಗೆ ಬಾಗಿಲು ಹಾಕಿದೆ. ಅಲ್ಲಿ ಮಕ್ಕಳ ಗತಿ ಏನು ? ಅಂತಹ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾದರೆ, ಅವರ ಶಾಪ ತಟ್ಟುವುದಿಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ. ಹೀಗೆ ಅಕ್ರೋಶವಾಗಿ ಮಾತನಾಡಿದರೆ ಪ್ರಯೋಜನ ಆಗುವುದಿಲ್ಲ. ಉಪಾಧ್ಯಾಯರು ರಿಲೀವ್ ಆಗಿ ಇನ್ನೊಂದು ಕಡೆ ಹೋದಾಗ ಅಲ್ಲಿ ಜಾಗ ಇಲ್ಲ ಎಂದು ಹೇಳಿದರು. ಅಂಥಾದ್ದು ಸರ್ಕಾರದ ಗಮನಕ್ಕೆ ಬಂದರೆ, ಸಂಬಳ ಕೊಡುತ್ತೇನೆ; ಕೊಡುವುದಿಲ್ಲ ಎಂದು ಹೇಳುವುದಿಲ್ಲ. ಇಂತಹ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಇಂತಹವರು ಸಾವಿರಾರು ಜನರು ಎಂದು ಹೇಳಿದರು. ನನ್ನ ಹತ್ತಿರ ಅಂಕಿ ಅಂಶ ಇದೆ, ಸಾವಿರಾರು ಎಂದು ನುಮ್ಮನೆ ಬಾಯಲ್ಲಿ ಹೇಳಿದರೆ, ಸಾವಿರಾರು ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ — ತಮ್ಮ ಹೇಳಿಕೆಯಲ್ಲಿ ಸುಪ್ರೀಂ ಕೋರ್ಟಿಗೆ ಹೋಗಿದ್ದೇವೆಂದು ಹೇಳಿದ್ದೀರಿ. ಆಗಸ್ಟ್ 7 ನೇ ತಾರೀಖು ಹೈಕೋರ್ಟ್

(ಶ್ರೀ ಬಿ. ಪುಟ್ಟಸ್ವಾಮಯ್ಯ)

ತೀರ್ಮಾನ ಮಾಡಿತು. ಹೈಕೋರ್ಟ್ ತೀರ್ಮಾನವಾದ ಮೇಲೆ ಸುಪ್ರೀಂ ಕೋರ್ಟಿಗೆ ಹೋಗಿಯೇ ಇಲ್ಲ ಸುಪ್ರೀಂಕೋರ್ಟಿಗೆ ಹೋಗಬೇಕು ಎಂದು ಲೀವ್ ಅಪ್ಲಿಕೇಶನ್ ಮಾತ್ರ ಕೊಟ್ಟಿದ್ದೀರಿ. ಅದರ ಮೇಲೆ ಚರ್ಚೆ ನಡೆಯುತ್ತಾ ಇದೆ. ಆದುದರಿಂದ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಮೊದಲೇ ಅಂದರೆ 31ನೇ ಆಗಸ್ಟ್‌ನಲ್ಲಿ ಪತ್ರಿಕೆಯಲ್ಲಿ ಒಂದು ಮಾತು ಹೇಳಿದ್ದೀರಿ. ಅದಕ್ಕೆ ಸಂಬಂಧ ಪಟ್ಟ ಪ್ಯಾರಾವನ್ನು ಓದಿ ತಿಳಿಸುತ್ತೇನೆ. ಅದು ಹೀಗಿದೆ:—

"While expressing his sympathy for their cause, the Education Minister is stated to have refused to budge on the issue unless all the 1,000 and odd writ petitions of teachers were withdrawn. He, however, agreed to give fresh postings to teachers who have not yet taken charge in new stations, in their respective taluks as far as possible. In respect of about 8,000 teachers who have already reported for duty in new stations, mutual transfers to native taluks would be arranged. But the issue of teachers who had gone to the court would have to be settled there".

ಕೋರ್ಟಿಗೆ ಹೋಗಿರತಕ್ಕ ಉಪಾಧ್ಯಾಯರಿಗೆ ಆಗಸ್ಟ್ 7ರಂದು ಒಂದು ನ್ಯಾಯ ಅಜ್ಜೆರಾಗಿ ನಿಷ್ಕರ್ಷೆಯಾಗಿದೆ. ಉಪಾಧ್ಯಾಯರದು ಯಾವ ರಿಟ್ ಪಿಟಿಷನ್ ಬಾಕಿ ಇಲ್ಲ. ಹೈಕೋರ್ಟಿನ ತೀರ್ಮಾನ ಏನಿದೆ, ಅದನ್ನು ಕಳುಹಿಸಿಕೊಡುತ್ತೇನೆ. ಉಪಾಧ್ಯಾಯರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಕೋರ್ಟಿನಲ್ಲಿ ಇತ್ಯರ್ಥವಾದ ಮೇಲೆ, ಆ ಆಜ್ಞೆಯನ್ನು ಪಾಲಿಸಬೇಕಾದದ್ದು ಸರ್ಕಾರದ ನೀತಿಯಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್ — ಪೇಪರಿನಲ್ಲಿ ಬಂದಿರುವುದನ್ನು ಓದಿ ಹೇಳುತ್ತಿದ್ದಾರೆ, ಏನು ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ. — ಸನ್ಮಾನ್ಯ ಅಧ್ಯಕ್ಷರೇ, 25ನೇ ಎಪ್ರಿಲ್‌ನಲ್ಲಿ ಹೊರಡಿಸಿರತಕ್ಕ ವಿದ್ಯಾ ಇಲಾಖೆಯ ಆಜ್ಞೆಯಿಂದ ಗೊಂದಲವಯ ವಾತಾವರಣ ನೃಷ್ಟಿಯಾಗಿದೆ. ಕೆಲವು ಜನ ಉಪಾಧ್ಯಾಯರುಗಳು ಸರ್ಕಾರದ ಆಜ್ಞೆಯನ್ನನು ನರಿಸಿ ಬೇರೆ ತಾಲ್ಲೂಕ ಗಳಿಗೆ ಹೋಗಿ ಬೇರೆ ಜಾಗಗಳನ್ನು ಪಡೆದರು. ಮತ್ತೆ ಕೆಲವರು ಹೋಗಿ ಬೇರೆ ಜಾಗ ಪಡೆಯುವುದಕ್ಕೆ ಮುಂಚೆ ಸ್ಟೇ ಆರ್ಡರ್ ಬಂದಿರುವುದರಿಂದ, ಈಗ ಅವರು ತ್ರಿಶಂಕುಸ್ವರ್ಗದಲ್ಲಿದ್ದಾರೆ. ಕೆಲವರು ಸ್ಟೇ ಆರ್ಡರ್

ಬಂದಿದ್ದರಿಂದ ರಿಟ್ ಹಾಕಿ ಮನೆಯಲ್ಲಿ ಕೂತರು. ಮುಂದೆ ನಮಗೆ ಸರ್ಕಾರ ಒಳ್ಳೆಯದು ಮಾಡುತ್ತದೆ ಎಂಬ ಆಶಾಭಾವನೆಯಿಂದ ಇದ್ದಾರೆ. ಈಗ ಏನಾಗಿದೆಯೆಂದರೆ, ಹೀಗೆ ಉಪಾಧ್ಯಾಯರ 3—4 ವರ್ಗಗಳು ಸೃಷ್ಟಿಯಾಗಿ, ಯಾವ ಉಪಾಧ್ಯಾಯ ಎಲ್ಲಿ ಇರಬೇಕು ಎನ್ನುವುದು ಇನ್ನೂ ನಿರ್ಧಾರವಾಗಿಲ್ಲ, ಇಂತಹ ಪರಿಸ್ಥಿತಿ ಉಂಟಾಗಿದೆ. ಈ ಪರಿಸ್ಥಿತಿಗೆ ಕಾರಣ ಸರ್ಕಾರದ ಆಜ್ಞೆ ಎಂದು ಹೇಳಬೇಕಾಗಿದೆ. ಹೈಕೋರ್ಟು ತೀರ್ಮಾನ ಮಾಡಿರುವ ಪ್ರಕಾರ ಸರ್ಕಾರ ಎಲ್ಲಾ ವರ್ಗಗಳ ನೌಕರರನ್ನೂ ಸಹ ಒಂದೇ ದೃಷ್ಟಿಯಿಂದ ಕಾಣಬೇಕೇ ಹೊರತು, ಉಪಾಧ್ಯಾಯರುಗಳನ್ನು 10 ವರ್ಷ ಅದ ಮೇಲೆ ಬೇರೆ ತಾಲ್ಲೂಕುಗಳಿಗೆ ವರ್ಗಾಯಿಸುವುದು. It violates Article 14 and 16 of the Constitution. ಎಂದು ಹೈಕೋರ್ಟಿನವರು ಹೋಲ್ಡ್ ಮಾಡಿದರು. ಗ್ರಾಮ ಸೇವಕರು ಮತ್ತು ವಿಲೇಜ್ ಅಕೌಂಟೆಂಟ್ಸ್ ಮತ್ತು ಇನ್ನು ಬೇರೆ ನೌಕರರು ತಮ್ಮ ಸ್ವಂತ ತಾಲ್ಲೂಕುಗಳಲ್ಲಿ ಇರುವುದಕ್ಕೆ ಅವಕಾಶ ಇದೆ. ಆದುದರಿಂದ ಉಪಾಧ್ಯಾಯರುಗಳನ್ನು ಬೇರೆ ತಾಲ್ಲೂಕುಗಳಿಗೆ ಕಳುಹಿಸುವುದು ಸಮರ್ಥನೆ ಇಲ್ಲ, ನರಿಯೂದಂಥ, ನ್ಯಾಯವಾದಂಥ ವಾದವಲ್ಲ ಎಂದು ಹೈಕೋರ್ಟಿನವರು ತೀರ್ಮಾನ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣ ಮಾಡುವುದಕ್ಕೆ ತುರುಮಾಡಿದರೆ ಹೇಗೆ ? ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು. ನಾನು ಕ್ಲಾರಿಫಿಕೇಷನ್ ಗಳನ್ನು ಕೇಳಲು ಅವಕಾಶ ಕೊಟ್ಟರೆ ತಾವು ಹೀಗೆ ಭಾಷಣ ಮಾಡಲು ಹೋದರೆ ಹೇಗೆ ? ತಮಗೇನಾದರೂ ಹೇಳಿದರೆ ತಾವು ಕೋಪ ಮಾಡಿಕೊಳ್ಳುತ್ತೀರಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕ್ಲಾರಿಫಿಕೇಷನ್ನಿಗಾಗಿ ಸ್ವಲ್ಪ ವಿವರಗಳನ್ನು ತಿಳಿಸುತ್ತಿದ್ದೇನೆ. ನಾನು ಹೇಳುವುದು ಏಳನೇ ತಾರೀಖು ಹೈಕೋರ್ಟಿನ ತೀರ್ಮಾನ ಬಂದಿರುವುದರಿಂದ ಇದರ ಬಗ್ಗೆ ಯಾವ ಸಂದೇಹಕ್ಕೂ ಆಸ್ಪದ ಇಲ್ಲ. ರಿಟ್ ಆನ್ ಮ್ಯಾಂಡಮನ್ ಎಂದು ತೀರ್ಮಾನ ಕೊಟ್ಟಿರುವಾಗ ಇದರ ಮೇಲೆ ಸರಕಾರ ಸುಪ್ರೀಂ ಕೋರ್ಟಿಗೆ ಹೋಗಿ ಯಾವ ಸ್ಟೇ ಆರ್ಡರನ್ನೂ ಇನ್ನೂ ತರಲಿಲ್ಲ. ಇದುವರೆಗೆ ಸುಮಾರು ಒಂದು ತಿಂಗಳಾದರೂ ಯಾವ ವಿಧವಾದ ಕಾರ್ಯಕ್ರಮವನ್ನೂ ಸರಕಾರ ತೆಗೆದುಕೊಂಡಂತೆ ಕಾಣುತ್ತಿಲ್ಲ. ಇದೇನು ತೋರಿಸುತ್ತಿದೆ. ಎಂದರೆ ಒಂದು ರೀತಿಯಲ್ಲಿ ಇಂತಹ ನೌಕರ ವರ್ಗದವರ ಮೇಲೆ ಸೇಡಿನ ಮನೋಭಾವದಿಂದ ನೋಡಿಕೊಳ್ಳುತ್ತಾ ಹೋಗುವುದು ಸರಕಾರಕ್ಕೆ ನ್ಯಾಯವಲ್ಲ. ಆದುದರಿಂದ ಏಳನೇ ತಾರೀಖು ಹೈಕೋರ್ಟು ಕೊಟ್ಟಿರುವ ತೀರ್ಮಾನವನ್ನು ಯಾವಾಗ ಜಾರಿಗೆ ಕೊಡುತ್ತೀರಿ ? ಇದುವರೆಗೆ ಸುಪ್ರೀಂ ಕೋರ್ಟಿಗೆ ಹೋಗುವುದರ ಬಗ್ಗೆ ನಮ್ಮ ಸರಕಾರ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ.—ಮಾನ್ಯ ಅಧ್ಯಕ್ಷರೇ, ನೇಡಿನ ಮನೋಭಾವದಿಂದ ಮಾಡುತ್ತಾರೆ ಎಂದೇನು ಹೇಳಿದರು ಅದನ್ನು ನಾನು ಇಲ್ಲಿ ಪ್ರತಿಭಟಿಸುತ್ತೇನೆ. ಸರಕಾರದಲ್ಲಿ ನೇಡಿನ ಮನೋಭಾವ ಎನ್ನುವುದು ಇಲ್ಲವೇ ಇಲ್ಲ. ಇದು ಒಂದನೇದು. ಎರಡನೇದು ಇನ್ನು ಏನೇನೋ ಗೊಂದಲಗಳು ನಡೆಯುತ್ತಿವೆ ಎಂದರೆ, ಅಂತಹ ಯಾವ ಗೊಂದಲವೂ ಇಲ್ಲ. ಎಲ್ಲವೂ ಸರಿಯಾಗಿ ನಡೆಯುತ್ತಿವೆ. ಇನ್ನೂ ಮೂರನೇದು ಹೈಕೋರ್ಟಿನ ತೀರ್ಮಾನದ ಬಗ್ಗೆ ಅಪೀಲು ಹಾಕಲು ಸುಪ್ರೀಂ ಕೋರ್ಟಿಗೆ ಹೋಗಲಿಲ್ಲ ಎಂದು. ಇದಕ್ಕೆ ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿಲ್ಲ. ಇಲ್ಲೇ ಬೆಂಚು ಇದೆ, ಸುಪ್ರೀಂ ಕೋರ್ಟಿಗೇನೂ ಹೋಗಬೇಕಾದ್ದಿಲ್ಲ. ಜಡ್ಜ್‌ಮೆಂಟು ಕಾಪಿಗೆ ಅಪ್ಲೈ ಮಾಡಲಾಗಿತ್ತು. ಇದು ಈಗ ತಾನೇ ಬಂದಿದೆ. ಈ ಜಡ್ಜ್‌ಮೆಂಟು ಕಾಪಿಯನ್ನು ನೋಡಿ ಇನ್ನೂ ಅಪೀಲು ಮಾಡಲು ಅವಕಾಶವಿದೆ. ಬೇಕಾದರೆ ಅಪೀಲು ಮಾಡಿ ಬೆಂಚಿನ ಮೂಲಕ ಸ್ಟೇ ಆರ್ಡರು ತಂದರೂ ಇದರ ಮೇಲೇನೂ ಪರಿಣಾಮ ವಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸರಕಾರಿ ಹಾಗೂ ಖಾಸಗೀ ಕಾಲೇಜು ಉಪಾಧ್ಯಾಯರುಗಳ ಮುಷ್ಕರದಿಂದಾಗಿ ಕಾಲೇಜುಗಳು ಕೆಲಸ ಮ್ಯಾಡದಿರುವ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಜೊತೆಯಲ್ಲಿ ಮೈಸೂರು ಬನುಮಯ್ಯ ಕಾಲೇಜು ಟೀಚರುಗಳ ಬಗ್ಗೆ ಕೂಡ ನಾನು ಸರಕಾರದ ಗಮನ ಸೆಳೆದಿದ್ದೆ. ಮಾನ್ಯ ವಿದ್ಯಾ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

SRI A. R. BADARINARAYANA.—I require time till tomorrow and therefore I may kindly be permitted to make a statement tomorrow.

LAID ON THE TABLE PAPERS

MADAM SPEAKER.....Secretary may lay the papers on the Table.

THE SECRETARY.—I beg to lay -

(i) the second list of unstarred questions and answers of the Second Session,

(ii) the third list of un-starred questions and answers of the third Session.

SECOND LIST & OF SECOND SESSION, 1972

UNSTARRED QUSETION AND ANSWERS

ವರದಾನದಿಗೆ ಕೌಂಡ್ಲೆ ಹತ್ತಿರ ಅಣೆಕಟ್ಟು ಕಟ್ಟುವ ಯೋಜನೆ

೪೩. (ಲ):— ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ (ಶಿಕಾರಿ).— ಮಾನ್ಯ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ. —

(ಅ) ಸಾಗರ ತಾಲ್ಲೂಕು ಕೌಂಡ್ಲೆ ಹತ್ತಿರ ಪ್ರವಾಹ ನಿಯಂತ್ರಣ ಕ್ರಮವಾಗಿ ವರದಾನದಿಗೆ ಆಡ್ಡಕಟ್ಟೆ ಕಟ್ಟುವ ಯೋಜನೆ ಕೇಂದ್ರದ ಮಾಜೂ ರಾತಿಗೆ ರಾಜ್ಯ ಸರಕಾರ ಕಳುಹಿಸಿದ ತಾರೀಖು ಯಾವುದು ;

(ಆ) ಈ ವರದಾನದಿಗೆ ಬನವಾಸಿ ಹತ್ತಿರ ಕಟ್ಟೆಕಟ್ಟುವ ಯೋಜನೆ ಸರ ಕಾರದ ಪರಿಶೀಲನೆಯಲ್ಲಿದೆಯೆ ;

(ಇ) ಹಾಗಾದರೆ ಅದು ಯಾವಾಗ ಕಾರ್ಯಗತವಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು : —

(ಅ) ಕೌಂಡ್ಲೆ ಯೋಜನೆಯು ಇನ್ನೂ ತನಿಖೆಯಲ್ಲಿದೆ.

(ಆ) ಬನವಾಸಿ ಹತ್ತಿರ ವರದಾನದಿಗೆ ಕಟ್ಟೆಕಟ್ಟುವ ಯಾವ ಯೋಜನೆಯೂ ಪರಿಶೀಲನೆಯಲ್ಲಿಲ್ಲ.

(ಇ) (ಅ) ಉತ್ತರದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭೂಹೀನರಿಗೆ ಭೂಮಿಯನ್ನು ಹಂಚುವುದು.

೪೪. (೨೨) ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಶಿಕಾರಿ) .... ಕಂದಾಯ ಮಂತ್ರಿಗಳು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೇ :—